# ಇಂಡಿ ಶಾಸಕ ಸೇರಿ ಮೂವರ ವಿರುದ್ಧ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ 28/12

ವಿಜಯಪುರ: ಚುನಾವಣೆ ಸಂದರ್ಭದಲ್ಲಿ ಸೂಚಕರ ನಕಲಿ ಸಹಿ ಮಾಡಿ, ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂಬ ಆರೋಪದ ಮೇಲೆ ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ ಸೇರಿ ಮೂವರು ಮಂದಿಯ ವಿರುದ್ಧ ಇಂಡಿ ಪೊಲೀಸರು ಬುಧವಾರ ಎಫ್‌ಐಆರ್ ದಾಖಲಿಸಿದ್ದಾರೆ.

ಪ್ರಕರಣದಲ್ಲಿ ಶಾಸಕರು ಪ್ರಮುಖ ಆರೋಪಿಯಾಗಿದ್ದು, ಇವರ ಬೆಂಬಲಿಗರಾದ ಮಲ್ಲನಗೌಡ ಪಾಟೀಲ, ಚೆಟ್ಟೆಪ್ಪರವಳಿ ಅವರನ್ನು ಎರಡು ಮತ್ತು ಮೂರನೇ ಆರೋಪಿಯನ್ನಾಗಿಸಲಾಗಿದೆ.

**ಏನಿದು ಪ್ರಕರಣ?:** ಇಂಡಿ ತಾಲ್ಲೂಕು ಮರಗೂರ ಗ್ರಾಮದ ಭೀಮಾಶಂಕರ ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಗಳಿಗೆ 2019ರ ಫೆಬ್ರುವರಿಯಲ್ಲಿ ಚುನಾವಣೆ ನಡೆದಿತ್ತು. ನಿರ್ದೇಶಕರ ಮೂರು ಸ್ಥಾನಗಳಿಗೆ, ಮೂವರು ಆರೋಪಿತರು ಹಾಗೂ ಮಾಜಿ ಶಾಸಕ ಸಾರ್ವಭೌಮ ಬಗಲಿ ಅವರ ಪುತ್ರ ಸಂಕೇತ ಬಗಲಿ ಕಣದಲ್ಲಿದ್ದರು.

> **ನನ್ನ ಮೇಲಿನ ಆರೋಪಗಳು ಸತ್ಯಕ್ಕೆ ದೂರವಾಗಿವೆ. ಅಲ್ಲದೆ, ನಿರಾಧಾರವಾಗಿವೆ. ಅದರಲ್ಲಿ ಯಾವುದೇ ಹುರುಳಿಲ್ಲ. ಈ ಬಗ್ಗೆ ಕಾನೂನು ಹೋರಾಟ ಮಾಡುತ್ತೇನೆ**
>
> **ಯಶವಂತರಾಯಗೌಡ ಪಾಟೀಲ**
> ಶಾಸಕ, ಇಂಡಿ ಮತಕ್ಷೇತ್ರ

'ನಾಮಪತ್ರ ಹಿಂಪಡೆಯಲು ಫೆ. 18 ಕೊನೆ ದಿನವಾಗಿತ್ತು. ಆ ದಿನ ಮಲ್ಲನಗೌಡ ಪಾಟೀಲ ಅವರು ವಿಜಯಪುರದಲ್ಲಿರುವ ನಮ್ಮ ನಿವಾಸಕ್ಕೆ ತೆರಳಿ, ನಿಮ್ಮ ಪುತ್ರ ಸಂಕೇತ ಅವರ ನಾಮಪತ್ರ ಹಿಂಪಡೆಯಬೇಕು' ಎಂದು ತಂದೆಯ ಮೇಲೆ ಒತ್ತಡ ಹಾಕಿದ್ದಾರೆ. ಇದಕ್ಕೆ ಅವರು ನಿರಾಕರಿಸಿದಾಗ, 'ಶಾಸಕರು ನಿಮ್ಮನ್ನು ನೋಡಿಕೊಳ್ಳುತ್ತಾರೆ' ಎಂದು ಜೀವಬೆದರಿಕೆ ಹಾಕಿದ್ದಾರೆ. ನಾಮಪತ್ರ ಹಿಂಪಡೆಯದಿದ್ದರೂ ಮೂವರು ಆರೋಪಿಗಳು ಸೇರಿ, ನನ್ನ ಸೂಚಕ ಹಾಗೂ ಸಹೋದರ ಡಾ.ಸಂತೋಷ ಬಗಲಿ ಅವರ ಸಹಿಯನ್ನು ತಾವೇ ಮಾಡಿ, ನಾಮಪತ್ರವನ್ನು ಹಿಂಪಡೆದಂತೆ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿದ್ದಾರೆ' ಎಂದು ಸಂಕೇತ ಬಗಲಿ ದೂರಿನಲ್ಲಿ ತಿಳಿಸಿದ್ದಾರೆ. 'ಫೆಬ್ರುವರಿಯಲ್ಲೇ ಈ ಬಗ್ಗೆ ದೂರು ನೀಡಲು ಪೊಲೀಸ್ ಠಾಣೆಗೆ ತೆರಳಿದ್ದೆವು. ಆದರೆ, ಪೊಲೀಸರು ದೂರು ದಾಖಲಿಸಿಕೊಳ್ಳಲು ನಿರಾಕರಿಸಿದರು. ಆಗ ಹೈಕೋರ್ಟ್ ಕಲಬುರ್ಗಿ ಪೀಠದ ಮೆಟ್ಟಿಲೇರಿದ್ದೆವು. ಇದೀಗ ಕೋರ್ಟ್ ಸೂಚನೆಯಂತೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ' ಎಂದು ಸಂಕೇತ 'ಪ್ರಜಾವಾಣಿ'ಗೆ ತಿಳಿಸಿದರು.